ಬೆಂಗಳೂರು ಮಹಾಧರ್ಮಕ್ಷೇತ್ರ

# ಸುತ್ತೋಲೆ





ಮಹಾಧರ್ಮಾಧ್ಯಕ್ಷರ ನಿಲಯ, 75, ಮಿಲ್ಲರ್ಸ್ ರಸ್ತೆ, ಬೆನ್ಸನ್ ಟೌನ್ ಅಂಚೆ
ಬೆಂಗಳೂರು – 560 046, ಕರ್ನಾಟಕ, ಭಾರತ, ದೂರವಾಣಿ: 23330438, ಫ್ಯಾಕ್ಸ್: 080–23531600
ಇ–ಮೇಲ್: archbishop@bangalorearchdiocese.com, ವೆಬ್‌ಸೈಟ್: www. bangalorearchdiocese.com



**No. 3** **ಆಗಸ್ಟ್ 2018**


ಒಲವಿನ ಗುರುಗಳೇ, ಧಾರ್ಮಿಕ ಸಹೋದರ–ಸಹೋದರಿಯರೇ ಮತ್ತು ದೈವಪ್ರಜೆಗಳೇ,

## 1. ಯಾಜಕರ ದಿನ

ಸಂತ ಜಾನ್ ಮೇರಿ ವಿಯಾನ್ನಿಯರವರ ದಿನ ಹತ್ತಿರದಲ್ಲಿದೆ (4ನೇ ಆಗಸ್ಟ್), ಅದು ಯಾಜಕರ ದಿನವಾಗಿದೆ. "ಓ ಯಾಜಕನೇ ನೀನೆಷ್ಟು ಶ್ರೇಷ್ಠನು! ನೀನು ಯಾರೆಂದು ಅರಿತರೆ, ಸಾಯುವುದೊಂದೇ ಬಾಕಿಯಷ್ಟೇ" ಎಂದು ಸಂತ ಜಾನ್ ಮೇರಿ ವಿಯಾನ್ನಿಯವರು ಯಾಜಕನ ಮಹತ್ವವನ್ನು ಕುರಿತು ಹೇಳಿರುವರೆನ್ನಲಾಗಿದೆ. ಸಂತ ವಿಯಾನ್ನಿಯವರ ಪ್ರತಿರೂಪದಂತಿರುವ ಪ್ರಸ್ತುತ ವಿಶ್ವಗುರು ಫ್ರಾನ್ಸಿಸ್‌ರವರು ಸರಳರು ಮತ್ತು ಸಜ್ಜನರು ಹಾಗು ಕರುಣೆಯ ಸಾಕಾರಮೂರ್ತಿಯಾಗಿರುವರು. ವಿಶ್ವಗುರುಗಳು ಅವರ ಒಂದು ಬೋಧನೆಯಲ್ಲಿ "ಧರ್ಮಸಭೆಗೆ ಇಂದು ಅವಶ್ಯಕತೆಯಿರುವುದರ ಬಗ್ಗೆ ಸ್ಪಷ್ಟವಾಗಿ ನಾನು ಕಾಣುತ್ತೇನೆ. ಅದೇನೆಂದರೆ ಭಕ್ತವಿಶ್ವಾಸಿಗಳ ಗಾಯಗಳನ್ನು ಗುಣಪಡಿಸುವ ಮತ್ತು ನೊಂದಿರುವ ಹೃದಯಗಳಿಗೆ ಸಾಂತ್ವನಪಡಿಸುವ ಕಾರ್ಯವಾಗಿದೆ. ಅಂತಹ ಸೇವಾ ಕಾರ್ಯವನ್ನು ಅತ್ಯಂತ ಆತ್ಮೀಯವಾಗಿಯೂ ಹಾಗು ಸಮೀಪದಿಂದಲೂ ಮಾಡಬೇಕಿದೆ. ಯುದ್ಧದ ಬಳಿಕ ಹೇಗೆ ಬಾಹ್ಯ ಆಸ್ಪತ್ರೆಗಳು ಸಂತ್ರಸ್ತರ ಆರೈಕೆ ಮಾಡುತ್ತವೆಯೋ ಹಾಗೆಯೇ ಧರ್ಮಸಭೆಯನ್ನು ನಾನು ಕಾಣುತ್ತೇನೆ. ಕೆಲವೊಂದು ಸಲ ಧರ್ಮಸಭೆಯು ಸಣ್ಣಪುಟ್ಟ ಕಾನೂನುಗಳಿಗೆ ಅಂಟಿಕೊಂಡಿರುವುದನ್ನು ಬಿಟ್ಟು ಪ್ರಮುಖ ಕಾರ್ಯವಾದ 'ಯೇಸು ಕ್ರಿಸ್ತರು ನಿನ್ನನ್ನು ರಕ್ಷಿಸಿದ್ದಾರೆ' ಎಂಬ ಸಂದೇಶವನ್ನು ಪ್ರಥಮವಾಗಿ ಸಾರಬೇಕಿದೆ" ಎಂದು ವಿಶ್ವಗುರು ತಿಳಿಸಿದ್ದಾರೆ.

ಕೆಲವು ವರ್ಷಗಳಿಂದ ಸಂತ ಜಾನ್ ಮೇರಿ ವಿಯಾನ್ನಿಯವರನ್ನು ಧರ್ಮಕ್ಷೇತ್ರದ ಗುರುಗಳ ಪಾಲಕರೆಂದು ಮಾತ್ರವಲ್ಲದೆ ಎಲ್ಲಾ ಗುರುಗಳ ಪಾಲಕರೆಂದೂ ತಿಳಿಸಲಾಗಿದೆ. ಆಗಸ್ಟ್ 4 ರಂದು ಈ ಹಬ್ಬವನ್ನು ಆಚರಿಸುವಾಗ, ಭಕ್ತವಿಶ್ವಾಸಿಗಳು ಪಾಲ್ಗೊಳ್ಳುವುದರ ಜೊತೆಗೆ, ಯಾಜಕರಾದ ನಾವು ಕುಟುಂಬಗಳ ಭೇಟಿ, ಸಂಸ್ಕಾರಗಳ ಅರ್ಥಭರಿತ ಆಚರಣೆಯ ಮೂಲಕವಾಗಿ, ವಿಶೇಷವಾಗಿ ಪಾಪವಿಜ್ಞಾಪನಾ ಸಂಸ್ಕಾರದ ಆಚರಣೆಯ ಮೂಲಕ ಸಂತರು ಜೀವಿಸಿದಂತಹ ಜೀವನವನ್ನು ಪುನರ್‌ಸ್ಮರಿಸಿ, ನಾವು ಅಂತೆಯೇ ಜೀವಿಸಲು ಪ್ರಯತ್ನಿಸೋಣ.

ಈ ಹಬ್ಬವು ನಮಗೆ ತಿಳಿಯಪಡಿಸುವ ಮತ್ತೊಂದು ಅಂಶವೇನೆಂದರೆ, ಯಾಜಕರ ಸೇವೆಯನ್ನು ಭಕ್ತರು ಧನ್ಯತೆಯಿಂದ ಸ್ಮರಿಸುವುದು ಮತ್ತು ಯಾಜಕರು ತಮ್ಮ ಬದುಕನ್ನು ಆಧ್ಯಾತ್ಮಿಕ ಪರಾಮರ್ಶೆ ಮಾಡುವ ಸಂದರ್ಭವೂ ಇದಾಗಿದೆ. ಯೇಸುವಿನ ನಾಮದಲ್ಲಿ ಜನರಿಗೆ ಹತ್ತಿರವಾಗುವ ರೀತಿಯಲ್ಲಿ ಯಾಜಕರು ಬದುಕನ್ನು ರೂಪಿಸಿಕೊಳ್ಳಲು ಆಸಕ್ತರಾಗಿರಬೇಕು. ಅಂತೆಯೇ ಸಂತ ಜಾನ್ ಮೇರಿ ವಿಯಾನ್ನಿಯವರ ಭವ್ಯ ವಚನವಾದ "ಯಾಜಕದೀಕ್ಷೆಯು ಯೇಸುವಿನ ಹೃದಯದ ಪ್ರೀತಿಯ ಪ್ರತೀಕ" ಎಂಬುದನ್ನು ಮರೆಯದಿರೋಣ.

## 2. ನಿವೃತ್ತ ಮಹಾಧರ್ಮಾಧ್ಯಕ್ಷ ಬರ್ನಾಡ್ ಮೊರಾಸರ 77ನೇ ಜನ್ಮದಿನ

ಆಗಸ್ಟ್ 10ರಂದು ಮಹಾಧರ್ಮಾಧ್ಯಕ್ಷರ ಹುಟ್ಟುಹಬ್ಬದ ದಿನ. ಅದರ ಕುರಿತು ಅವರಿಗೆ ಆಚರಿಸಲು ಅಷ್ಟೊಂದು ಆಸಕ್ತಿಯಿಲ್ಲದಿದ್ದರೂ, ನಿವೃತ್ತ ಮಹಾಧರ್ಮಾಧ್ಯಕ್ಷರ ಜೀವನ, ಪ್ರಸನ್ನತೆ ಹಾಗು ಮಹಾಧರ್ಮಕ್ಷೇತ್ರದಲ್ಲಿ ಅವರು ಸಲ್ಲಿಸಿದ ಸುದೀರ್ಘ ಫಲಭರಿತ ಸೇವೆಗಾಗಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಲು ನಾನು ಅವರನ್ನು ಆಹ್ವಾನಿಸಿದ್ದೇನೆ. ಅಂತೆಯೇ ಎಲ್ಲಾ ಯಾಜಕರನ್ನು ಮತ್ತು ಮಹಾಧರ್ಮಕ್ಷೇತ್ರದ ಧಾರ್ಮಿಕ ಸಹೋದರ/ಸಹೋದರಿಯರನ್ನು ದಿನಾಂಕ 10ನೇ ಆಗಸ್ಟ್ 2018, ಸಂಜೆ 5.30 ಗಂಟೆಗೆ ಸಂತ ಫ್ರಾನ್ಸಿಸ್ ಕ್ಸೇವಿಯರ್ ಪ್ರಧಾನಾಲಯದಲ್ಲಿ ನೆರವೇರುವ ಪವಿತ್ರ ಬಲಿಪೂಜೆಯಲ್ಲಿ ಭಾಗವಹಿಸಲು. ಅದಾದ ಬಳಿಕ ನಿವೃತ್ತ ಮಹಾಧರ್ಮಾಧ್ಯಕ್ಷರಿಗೆ ಶುಭಾಷಯಗಳನ್ನು ಕೋರಲು ನಿಮ್ಮೆಲ್ಲರನ್ನು ಆಹ್ವಾನಿಸುತ್ತೇನೆ. ನಂತರ ಸಹ ಭೋಜನದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

ಮಹಾಧರ್ಮಕ್ಷೇತ್ರದಲ್ಲಿ ನಿವೃತ್ತ ಮಹಾಧರ್ಮಾಧ್ಯಕ್ಷರ ಮುಂದುವರೆದ ದೈವಾರಾಧನಾ ವಿಧಿಯಾಚರಣೆಯ ಸೇವೆ ಮತ್ತು ಇತರ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಿಕೆಯನ್ನು ಕಂಡು ಅವರನ್ನು ಅಭಿನಂದಿಸಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಕೆಲವೊಂದು ಸಲ ನನ್ನ ನಿಗದಿತ ಕರ್ತವ್ಯದ ಪ್ರಯುಕ್ತ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲಾಗುವುದಿಲ್ಲ. ಹಾಗಾಗಿ ಅವರ ನೆರವು ನನಗೆ ಬಹಳ ಸಹಕಾರಿಯಾಗಿದೆ. ಈ ತಿಂಗಳಿನಿಂದ ಮೊದಲ್ಗೊಂಡು ನಿವೃತ್ತ ಮಹಾಧರ್ಮಾಧ್ಯಕ್ಷ ಬರ್ನಾಡ್ ಮೊರಾಸರ ತಿಂಗಳ ಕಾರ್ಯಕ್ರಮಗಳ ವೇಳಾಪಟ್ಟಿಯನ್ನು ಸುತ್ತೋಲೆಯಲ್ಲಿ ಪ್ರಕಟಿಸಲಾಗುವುದು.

## 3. ಮಂಗಳೂರು ಧರ್ಮಕ್ಷೇತ್ರಕ್ಕೆ ನೂತನ ಧರ್ಮಾಧ್ಯಕ್ಷರು

3ನೇ ಜುಲೈ 2018ನೇ ತಾರೀಖು ಪ್ರೇಷಿತ ಸಂತ ತೋಮಾಸರ ಹಬ್ಬದಂದು, ಪೂಜ್ಯ ಶ್ರೇಷ್ಠಗುರು ಪೀಟರ್ ಪಾಲ್ ಸಲ್ಡಾನರವರು ಮಂಗಳೂರಿನ ನೂತನ ಧರ್ಮಾಧ್ಯಕ್ಷರಾಗಿ ನೇಮಕಗೊಂಡಿರುವ ಶುಭ ಸಮಾಚಾರವನ್ನು ನಾವು ಸ್ವೀಕರಿಸಿದೆವು. ಅವರನ್ನು ಆಯ್ಕೆ ಮಾಡುವ ವೇಳೆಯಲ್ಲಿ ಪೀಟರ್ ಪಾಲ್ ಸಲ್ಡಾನರವರು ರೋಮಿನ ಉರ್ಬಾನಿಯ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಅದಕ್ಕೂ ಮುನ್ನ ಮಂಗಳೂರಿನ ಧರ್ಮಕೇಂದ್ರಗಳಲ್ಲಿ ಸೇವೆ ಮಾಡಿರುವರಲ್ಲದೆ, ಮಂಗಳೂರಿನ ಜೆಪ್ಪು ಸಂತ ಜೋಸೆಫರ ಗುರುಮಠದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಮಾಡಿರುವರು.

ಶ್ರೇಷ್ಠಗುರು ಪೀಟರ್ ಪಾಲ್ ಸಲ್ಡಾನರವರು ಮಂಗಳೂರಿನ ಕೀರಮ್ ಧರ್ಮ ಕೇಂದ್ರದಲ್ಲಿ 1964ರಲ್ಲಿ ಜನಿಸಿದರು. 1991ರ ಮೇ 6 ರಂದು ಯಾಜಕ ದೀಕ್ಷೆಯನ್ನು

ಸ್ವೀಕರಿಸಿದರು. ಅವರ ಸಹನಶೀಲ ಹಾಗು ಆತ್ಮೀಯ ವ್ಯಕ್ತಿತ್ವದ ಪ್ರಭಾವದಿಂದ ಮೊನ್ಸಿಜ್ಞೊರ್ ಪೀಟರ್‌ರವರು ಸಭಾಪಾಲಕರಾಗಿ, ಕ್ರೈಸ್ತ ಸಭೆಯ ನಾಯಕರಾಗಿ ಹಾಗು ಶಿಕ್ಷಣ ತಜ್ಞರಾಗಿರುವ ಅವರು ಹಲವಾರು ಭಾರತೀಯ ಹಾಗು ಯೂರೋಪಿನ ಭಾಷೆಗಳನ್ನು ಬಲ್ಲವರು. ಅವರ ಧರ್ಮಾಧ್ಯಕ್ಷೀಯ ಪೀಠಾರೋಹಣವು 15ನೇ ಸೆಪ್ಟೆಂಬರ್ 2018 ಮುಂಜಾನೆ 9.30 ಗಂಟೆಗೆ ಮಂಗಳೂರಿನಲ್ಲಿ ನೆರವೇರುವುದು. ಚುನಾಯಿತ ಧರ್ಮಾಧ್ಯಕ್ಷರಿಗೆ ನಮ್ಮ ಶುಭಾಷಯಗಳನ್ನು ಕೋರುತ್ತಾ ಅವರ ಧರ್ಮಾಧ್ಯಕ್ಷೀಯ ಸೇವೆ ಸಂತೃಪ್ತಿಯಿಂದಿರಲಿ ಎಂದು ಪ್ರಾರ್ಥಿಸೋಣ.

ಇದೇ ಸಂದರ್ಭದಲ್ಲಿ ನಮ್ಮ ಅಭಿನಂದನೆ ಹಾಗು ಕೃತಜ್ಞತೆಯನ್ನು ಪರಮ ಪೂಜ್ಯ ಅಲಾಷಿಯಸ್ ಪಾಲ್ ಡಿಸೋಜಾರವರಿಗೆ ಅರ್ಪಿಸುವಾಗ, ಮಂಗಳೂರಿನ ನಿವೃತ್ತ ಧರ್ಮಾಧ್ಯಕ್ಷರು, ಸುಮಾರು 22 ಸುದೀರ್ಘ ವರ್ಷಗಳನ್ನು ಸೇವೆಗೆ ಮುಡಿಪಾಗಿಟ್ಟವರು. ಓರ್ವ ಉತ್ತಮ ಪಾಲಕರಾಗಿ ಮಂಗಳೂರು ಧರ್ಮಕ್ಷೇತ್ರಕ್ಕೆ ಮತ್ತು ಕರ್ನಾಟಕ ಪ್ರಾಂತ್ಯಕ್ಕೆ ಅವರು ಮಾಡಿರುವ ಸೇವೆ ಅಪಾರವಾದದ್ದು ಹಾಗಾಗಿ ಅವರನ್ನು ಅಭಿನಂದಿಸುತ್ತಾ ಅವರಿಗಾಗಿ ಪ್ರಾರ್ಥಿಸೋಣ.

## 4. ಪಲ್ಲಿಯಂ (ಆಯುತಾಕಾರದ ದೊಡ್ಡ ನಿಲುವಂಗಿ) ಪ್ರತಿಷ್ಠಾಪನಾ ವಿಧಿಯಾಚರಣೆ

ಪಲ್ಲಿಯಂ ಎನ್ನುವುದು ಧರ್ಮಸಭೆಯ ವಸ್ತ್ರವಾಗಿದ್ದು ರೋಮನ್ ಕಥೋಲಿಕ ಸಭೆಯಲ್ಲಿ ಮಹಾಧರ್ಮಾಧ್ಯಕ್ಷ ಪದವಿಯಲ್ಲಿರುವವರಿಗೆ ಹಲವು ಶತಮಾನಗಳಿಂದ ವಿಶ್ವಗುರುಗಳು ಅಧಿಕಾರಿಯ ಪರಿಧಿಯ ಚಿಹ್ನೆಯಾಗಿ ನೀಡುವ ಪ್ರತಿಷ್ಠಿತ ವಿಧಿಯಿದಾಗಿದೆ. ಇದಕ್ಕೂ ಮುನ್ನ ಪಲ್ಲಿಯಂ ಅನ್ನು ಸಂತ ಪೇತ್ರ ಮತ್ತು ಪೌಲರ ಹಬ್ಬದಂದು ವ್ಯಾಟಿಕಾನ್ನಿನಲ್ಲಿ ನೀಡಲಾಗುತ್ತಿತ್ತು. ಪ್ರಸ್ತುತ ವಿಶ್ವಗುರುಗಳು 2015ರಿಂದ ಪ್ರೇಷಿತ ರಾಯಭಾರಿಗಳ ಮೂಲಕ ಆಯಾ ಪ್ರದೇಶಗಳಲ್ಲೇ ಪಲ್ಲಿಯಂ ಅನ್ನು ಪ್ರಾಪ್ತಿ ಮಾಡುವುದರಿಂದ ಸ್ಥಳೀಯ ಧರ್ಮಸಭೆ ಮತ್ತು ರೋಮಿನಲ್ಲಿರುವ ವಿಶ್ವಗುರುಗಳೊಂದಿಗೆ ಬಾಂಧವ್ಯವನ್ನು ಸೂಚಿಸಲು ಸ್ಥಳೀಯವಾಗಿಯೇ ನೀಡುವ ವಾಡಿಕೆ ಆರಂಭಗೊಂಡಿದೆ.

ಭಾರತದ ಪ್ರೇಷಿತ ರಾಯಬಾರಿಗಳಾದ ಪರಮ ಪೂಜ್ಯ ಜಿಯಾಮ್ ಬಾಪ್ಟಿಸ್ತಾ ಡಿಕ್ವಾಟ್ರೊರವರು ಸೆಪ್ಟೆಂಬರ್ 12, 2018ರಂದು ಸಂತ ಫ್ರಾನ್ಸಿಸ್ ಕ್ಸೇವಿಯರ್ ಪ್ರಧಾನಾಲಯದಲ್ಲಿ ಪವಿತ್ರ ಬಲಿಪೂಜೆಯಲ್ಲಿ ಪಲ್ಲಿಯಂ ಅನ್ನು ನನಗೆ ಪ್ರಧಾನ ಮಾಡುವರು. ಪ್ರಾಂತ್ಯದ ಧರ್ಮಾಧ್ಯಕ್ಷರುಗಳು ಹಾಜರಿರುವರು. ಧರ್ಮಕೇಂದ್ರದ ಗುರುಗಳನ್ನು, ಧಾರ್ಮಿಕ ಸಹೋದರ/ಸಹೋದರಿಯರನ್ನು ಮತ್ತು ಮಹಾಧರ್ಮಕ್ಷೇತ್ರದ ಭಕ್ತವಿಶ್ವಾಸಿಗಳನ್ನು ಈ ಪವಿತ್ರ ಬಲಿಪೂಜೆಗೆ ಆಹ್ವಾನಿಸುತ್ತೇನೆ. ಹಾಗೂ ಮಹಾ ಧರ್ಮಕ್ಷೇತ್ರದಲ್ಲಿ ನನ್ನ ಪಾಲನಾ ಸೇವೆಗಾಗಿ ಪ್ರಾರ್ಥಿಸಿರಿ ಎಂದು ಭಿನ್ನಯಿಸುತ್ತೇನೆ.

## 5. ಮಹಾಧರ್ಮಕ್ಷೇತ್ರದ ಯಾಜಕರಿಗೆ ಮತ್ತು ಧಾರ್ಮಿಕ ಯಾಜಕರಿಗೆ ಧ್ಯಾನಕೂಟ

ಮಹಾಧರ್ಮಕ್ಷೇತ್ರದ ಗುರುಗಳಿಗೆ ಹಾಗು ಮಹಾಧರ್ಮಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಧಾರ್ಮಿಕ ಸಭೆಯ ಯಾಜಕರಿಗೆ ಪಾಲನಾ ಭವನದಲ್ಲಿ ದಿನಾಂಕ 13ನೇ ಆಗಸ್ಟ್ 2018ರಂದು 10.00 ಗಂಟೆಗೆ ಧ್ಯಾನಕೂಟವಿರುವುದು. ದಯವಿಟ್ಟು ಭಾಗವಹಿಸಿರಿ.

## 6. ಮಹಾಧರ್ಮಕ್ಷೇತ್ರದ ವಲಯಗಳಿಗೆ ನನ್ನ ಭೇಟಿ

ಮಹಾಧರ್ಮಕ್ಷೇತ್ರವನ್ನು ಸರಿಯಾಗಿ ಅರ್ಥೈಸಿಕೊಳ್ಳಲು, ಅವರವರ ವಲಯಗಳಲ್ಲಿ ಯಾಜಕರನ್ನು ಸಂಧಿಸಲು, ಬರುವ ಆಗಸ್ಟ್ ಮತ್ತು ಸೆಪ್ಟೆಂಬರ್ 2018 ತಿಂಗಳುಗಳ ಉಲ್ಲೇಖಿತ ದಿನಗಳಲ್ಲಿ ಭೇಟಿ ಮಾಡಲು ನಾನು ಇಚ್ಛಿಸುತ್ತೇನೆ.

ವಿವರಗಳಿಗೆ ದಯವಿಟ್ಟು ಪುಟ 11ನ್ನು ನೋಡಿ.

## 7. ಕಾರಾಗೃಹ ಸೇವಾ ಭಾನುವಾರ (12.08.2018)

ಕಾರಾಗೃಹ ಸೇವೆಯು ಧರ್ಮಸಭೆಯಲ್ಲಿ ಇತ್ತೀಚಿನ ಪಾಲನಾ ಕಾರ್ಯವಾಗಿದ್ದು ಧರ್ಮಸಭೆಯು ಅತ್ಯಂತ ಉತ್ಸುಕತೆಯಿಂದ ಆ ಕಾರ್ಯವನ್ನು ಮಾಡುತ್ತಿದೆ. ಸೆರೆಮನೆಯಲ್ಲಿ ಬಂಧಿಯಾಗಿರುವುದೆಂದರೆ ಓರ್ವ ವ್ಯಕ್ತಿಯ ಬದುಕಿನಲ್ಲಿ ಅತ್ಯಂತ ದುರಂತದ ವಿಷಯವಾಗಿರುತ್ತದೆ. ಅವಮಾನ ಮತ್ತು ಅಪರಾಧದ ಮನಸ್ಸು, ನಿಂದೆ ಮತ್ತು ನೋವು, ಬೇರ್ಪಡಿಸುವಿಕೆ ಮತ್ತು ನ್ಯಾಯಯುತವಾಗಿಯೇ ಅಥವಾ ಅನ್ಯಾಯವಾಗಿ ದಂಡನೆಗೆ ಗುರಿಯಾದಂತಹ ವ್ಯಕ್ತಿಯ ಮನಸ್ಸಿನ ಮೇಲೆ ಆಗುವಂತಹ ಕಳಂಕವು, ಜೀವನ ಪರ್ಯಂತರ ದುರ್ಬಲತೆಗೆ ಈಡುಮಾಡುತ್ತದೆ. ಈ ಕಾರಣಕ್ಕಾಗಿಯೇ ಧರ್ಮಸಭೆಯು ಇಂತಹ ದುಃಖದ ಮತ್ತು ದಂಡನೆಯ ಸಮಯದಲ್ಲಿ ಸೆರೆಮನೆಯಲ್ಲಿರುವವರೊಡನೆ ಸಾಂತ್ವನ ನೀಡಲು ಅವರ ಹತ್ತಿರದಲ್ಲಿರಲು ಇಚ್ಛಿಸುತ್ತದೆ.

ಆಗಸ್ಟ್ ತಿಂಗಳ ಎರಡನೇ ಭಾನುವಾರದಂದು ಕಾರಾಗೃಹ ಪಾಲನಾ ದಿನವನ್ನಾಗಿ ಆಚರಿಸಲಾಗುತ್ತದೆ. ನಾಜ಼ಿ ಯಾತನಾ ಶಿಬಿರದಲ್ಲಿ ಮತ್ತೋರ್ವ ಸೆರೆಯಾಳಿಗಾಗಿ ತನ್ನ ಪ್ರಾಣವನ್ನೇ ಧಾರೆಯೆರೆದ ಪೋಲೆಂಡಿನ ಸಂತರಾದ ಮಾಕ್ಸಿಮಿಲಿಯನ್ ಕೋಲ್ಬೆರವರ ಹಬ್ಬದಾಚರಣೆಯ ಸಮೀಪದಲ್ಲಿ ಕಾರಾಗೃಹ ಭಾನುವಾರವನ್ನು ಆಚರಿಸಲಾಗುತ್ತಿದೆ.

ಸೆರೆಮನೆವಾಸಿಗಳು, ಎಷ್ಟೇ ಕ್ರೂರಿಗಳಾಗಿದ್ದರೂ, ಅವರಿಗೆ ಎರಡನೇ ಅವಕಾಶವನ್ನು ಕೊಡಬೇಕಿದೆ. ಅಂತೆಯೇ ಸಾವಿರಾರು ಮಂದಿ ಸೆರೆಮನೆ ಯಾತನೆಯನ್ನು ಅನ್ಯಾಯವಾಗಿ ಶಿಕ್ಷೆಯನ್ನನುಭವಿಸುತ್ತಿರುವರು, ಸುಳ್ಳು ಆರೋಪಗಳ ಪ್ರಯುಕ್ತ ಆಪಾದನೆಗೀಡಾದವರನ್ನು ನಾವು ಮಾನವೀಯ ದೃಷ್ಟಿಯಲ್ಲಿ ಕಾಣಬೇಕಿದೆ. ಅಂತೆಯೇ ಇಂತಹ ಅವಮಾನ, ನಿಂದೆ ನೋವು ಹಾಗು ಕೆಲವೊಂದು ಸಲ ಅನುಭವಿಸಿದ ಚಿತ್ರಹಿಂಸೆಯ ಪ್ರಯುಕ್ತ ಉಂಟಾದ ಪ್ರತಿಕ್ರಿಯೆಗಳು ಹಾಗು ಸೆರೆಮನೆಯಾಳುಗಳ ಕುಟುಂಬಸ್ಥರು ಅನುಭವಿಸಿರುವ ಅವಮಾನಗಳನ್ನು ಕಡೆಗಣಿಸುವಂತಿಲ್ಲ. ಹೆಚ್ಚು ಹೆಚ್ಚು ಮಂದಿ ಮಾಡದ ತಪ್ಪಿಗೆ ಜೈಲುವಾಸವನ್ನನುಭವಿಸುವ ಇತ್ತೀಚಿನ ದಿನಗಳಲ್ಲಿ ಸಾಧಾರಣ ಕುಟುಂಬಗಳಿಂದ ಹಾಗು ಸಾಮಾನ್ಯ ಹಿನ್ನಲೆಯಿರುವ ಇಂತಹ ಜೈಲುವಾಸಿಗಳನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಅವರಿಗೆ ಸೂಕ್ತ ಸಲಹೆ ಹಾಗು ಸಹಾಯಹಸ್ತ ಚಾಚಿ ಆದಷ್ಟು ಮಟ್ಟಿಗೆ ಪುನರ್ವಸತಿ ಕಲ್ಪಿಸಬೇಕಾಗಿದೆ. ವಿಶೇಷವಾಗಿ ಕುಟುಂಬಗಳು ಮತ್ತು ಮಕ್ಕಳು ಇಂತಹ ಪುನರ್ವಸತಿಗೆ ಹಾಗು ಆರೈಕೆಗೆ ಪಾತ್ರರಾಗಬೇಕು.

ಈ ಎಲ್ಲಾ ವಾಸ್ತವಾಂಶಗಳನ್ನು ಕಾರಾಗೃಹ ಸೇವಾ ಭಾನುವಾರದಂದು (12ನೇ ಆಗಸ್ಟ್ 2018, ಭಾನುವಾರ) ನಾವು ಒಂದು ನಿಮಿಷ ಅವರ ಸ್ಥಾನದಲ್ಲಿ ನಿಂತು ಪರಾಮರ್ಶಿಸೋಣ.

## 8. ಮಾತೆ ಮರಿಯಳ ಸ್ವರ್ಗಾರೋಹಣ ಮತ್ತು ಸ್ವಾತಂತ್ರ್ಯ ದಿನದಾಚರಣೆ

ನಮ್ಮ ದೇಶದಲ್ಲಿ ಕ್ರೈಸ್ತರಾದ ನಾವು ಎರಡು ಆಚರಣೆಗಳಾದ ಮಾತೆ ಮರಿಯಳ ಸ್ವರ್ಗಾರೋಹಣವನ್ನು ಮತ್ತು ನಮ್ಮ ದೇಶದ ಸ್ವಾತಂತ್ರ್ಯ ದಿನವನ್ನು ಒಂದೇ ದಿನ ಆಚರಿಸುವ ಆತ್ಮೀಯ ಆಧ್ಯಾತ್ಮಿಕ ಸನ್ನಿವೇಶವನ್ನು ಕಾಣುತ್ತೇವೆ. ಮಾತೆ ಮರಿಯಳು ಬಿಡುಗಡೆಗೆ ಶ್ರೇಷ್ಠ ಚಿಹ್ನೆಯಾಗಿದ್ದಾರೆ. ಆಕೆಯ ಸ್ವರ್ಗಕ್ಕೆತ್ತಲ್ಪಟ್ಟ ದಿನವು, ಧರ್ಮಸಭೆಯಲ್ಲಿ ವಿಶ್ವಾಸದ ತತ್ವವಾಗಿದ್ದು, ಮನುಕುಲವನ್ನು ಪ್ರತಿನಿಧಿಸುವ ಪಾಪ ಮತ್ತು ದಾಸತ್ವದಿಂದ ಬಿಡುಗಡೆಗೊಂಡಂತಹ ಅವರ ನಿರ್ಮಲತ್ವದ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.

15ನೇ ಆಗಸ್ಟ್‌ರಂದು, ನಮ್ಮ ದೇಶದ ಸ್ವಾತಂತ್ರ್ಯ ದಿನವನ್ನು ಭಾರತದವರಾದ ನಾವು ಆಚರಿಸುತ್ತೇವೆ. ನಾವು ಸ್ವತಂತ್ರರು, ಎಂದು ನಾವು ಹೇಳಬಲ್ಲೆವು. ನಮ್ಮ ದೇಶದಲ್ಲಿ ಅಂತಹ ಸಂಪೂರ್ಣ ಸ್ವಾತಂತ್ರ್ಯವು ಚರ್ಚಾಸ್ಪದವಾಗಿದ್ದರೂ, ದೇವರ ಅಪಾರ ದಯೆಗಾಗಿ ಕೃತಜ್ಞತೆಯನ್ನು ಸಲ್ಲಿಸೋಣ. ರವೀಂದ್ರನಾಥ ಟಾಗೋರರ "ಸ್ವರ್ಗೀಯ ಸ್ವಾತಂತ್ರ್ಯದ, ನನ್ನ ತಂದೆಯಲ್ಲಿ, ನನ್ನ ದೇಶವು ಜಾಗೃತಗೊಳ್ಳಲಿ" ಎಂಬ ಈ ವಚನವು ಕ್ರಮಿಸಬೇಕಾದದ್ದು ಇನ್ನೂ ಹೆಚ್ಚಿದೆ ಎಂಬುದನ್ನು ತಿಳಿಸಿಕೊಡುತ್ತದೆ.

ಒಂದು ಉತ್ತಮ ಅರ್ಥವಿರುವ ಪ್ರಾರ್ಥನೆಯ ಮನವಿಯನ್ನು ದೇಶಕ್ಕಾಗಿ ಮಾಡಲು ಕೇಳಿಕೊಳ್ಳುವುದನ್ನು ಸಹ ಅಪಾಯದ ಹೇಳಿಕೆಗಳೆಂದು ಪ್ರತಿಪಾದಿಸುವಂತಹ ಪ್ರಸ್ತುತ ಕಾಲದಲ್ಲಿ ನಾವೆಷ್ಟು ಸ್ವತಂತ್ರರು ಮತ್ತು ಬಿಡುಗಡೆಗೊಂಡವರೆಂದು ಅತ್ಯಾವಲೋಕನ ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ನಮ್ಮ ದೇಶಕ್ಕಾಗಿ ಮತ್ತು ನಾಯಕರಿಗಾಗಿ ನಾವು ಪ್ರಾರ್ಥಿಸುವ ಹಂಗಿನಲ್ಲಿದ್ದೇವೆ. ಮಾತೆ ಮರಿಯಳು ನಮಗೆ ಆದರ್ಶ ಶಿರೋಮಣಿಯಾಗಿದ್ದು, ಸ್ವತಂತ್ರದ ಪ್ರತೀಕವಾಗಿದ್ದಾರೆ. ಏಕೆಂದರೆ ಆತ್ಮರಿಂದ ಮಾತ್ರವೇ ನಾವು ಸಂಪೂರ್ಣ ಬಿಡುಗಡೆಗೊಳ್ಳುವುದು. ಹಾಗಾಗಿ ನಮ್ಮ ವೈಯಕ್ತಿಕ ಬದುಕಿನಲ್ಲಿ ಬಿಡುಗಡೆಗೊಳ್ಳಬೇಕೆಂಬ ಹಂಗಿನಲ್ಲಿರುವವರು, ದ್ವಿತೀಯ ಸಂತ ಜಾನ್ ಪೌಲರ ಹೇಳಿಕೆಯಾದ 'ಬಿಡುಗಡೆಯೆನ್ನುವುದು ನಮ್ಮಿಷ್ಟದಂತೆ ನಡೆಯುವುದಲ್ಲ, ಬದಲಿಗೆ ಸರಿಯಾದುದನ್ನು ನಮ್ಮಿಷ್ಟವೆಂದು ಮಾಡುವುದು' ಎಂಬುದನ್ನು ಮರೆಯಬಾರದು.

## 9. ಮಾತೆ ಮರಿಯಳ ಜನನೋತ್ಸವ; ಹೆಣ್ಣು ಶಿಶುವಿನ ಹಬ್ಬ

ಹೆಣ್ಣು ಶಿಶುವಾಗಿ ಭಾರತದಲ್ಲಿ ಜನಿಸುವುದೇ ಓ! ಅದು ಅಷ್ಟು ಇಷ್ಟಪಡುವ ವಿಷಯವಲ್ಲ. ದುಃಖದ ವಿಷಯವೆಂದರೆ ನಮ್ಮ ಹೆಣ್ಣು ಮಕ್ಕಳು ಕಣ್ಮರೆಯಾಗುತ್ತಿದ್ದಾರೆ. ಜನಸಂಖ್ಯಾ ಬಿಕ್ಕಟ್ಟು ಇದಕ್ಕೆ ಸಾಕ್ಷಿಯೆನಿಸಿದೆ, ಅದೇನೆಂದರೆ: ಭಾರತದಲ್ಲಿ ಸರಾಸರಿ 1000 ಪುರುಷರಿಗೆ 924 ಸ್ತ್ರೀಯರಿರುವುದು ಅಂಕಿ ಅಂಶಗಳಿಂದ ತಿಳಿದಿರುವ ವಿಚಾರ. ಕೆಲವು ರಾಜ್ಯಗಳಲ್ಲಂತೂ ಅದು ಶೈಕ್ಷಣಿಕ ರಾಜ್ಯಗಳೆಂದು ಹೆಸರು ಗಳಿಸಿಕೊಂಡಿದ್ದರೂ ಇಂತಹ ಬಿಕ್ಕಟ್ಟು ತೀವ್ರವೆನಿಸಿಕೊಂಡಿದೆ. ಕ್ರೈಸ್ತ ಸಮುದಾಯಗಳಲ್ಲೂ ಇಂತಹ ಪರಿಸ್ಥಿತಿಯು ತಪ್ಪಿದ್ದಲ್ಲ.

ವಸ್ತುತಃ ಹೊಸ ಜೀವಕ್ಕೆ ದ್ವಾರಗಳು ಮುಚ್ಚಲ್ಪಟ್ಟಿವೆ, ಹಾಗೇನಾದರೂ ಸ್ವಾಗತಿಸಿದ್ದಲ್ಲಿ, ನಮ್ಮ ಸಮಾಜದಲ್ಲಿ ಗಂಡು ಶಿಶುವಿಗೆ ಮಾತ್ರ ಅವಕಾಶ; ಇದೊಂದು ಗಂಭೀರವಾದ ಬೇನೆಯಾಗಿ ಪರಿಣಮಿಸಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಕುಟುಂಬದ ವರಮಾನವು

ಹೆಚ್ಚಾದಂತೆಲ್ಲಾ ಮತ್ತು ಸಮಾಜದಲ್ಲಿ ಸ್ತ್ರೀಯರ ಶಿಕ್ಷಣ ಮಟ್ಟವು ಹೆಚ್ಚಿದಂತೆಲ್ಲಾ ಹೆಣ್ಣು ಶಿಶು ಹತ್ಯೆಗಳೂ ಹೆಚ್ಚಾಗುತ್ತಿವೆ. ನಮ್ಮ ಕುಟುಂಬಗಳು ಹೀಗೆ ಕುಗ್ಗುತ್ತಿರುವುದರ ಜೊತೆಗೆ, ಗಂಡು ಮಗುವಿನ ಪರಧೋರಣೆ ಹೆಚ್ಚಾಗಿ ಕುಟುಂಬಗಳಲ್ಲಿ ಹೆಣ್ಣು ಶಿಶುವಿನ ಜನನದ ಪ್ರಯುಕ್ತ ನಿರಾಶೆಯು ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಭಾರತದ ಸ್ಥಿತಿಯು ಭವಿಷ್ಯದಲ್ಲಿ ಈ ಅಸಮತೋಲನವನ್ನು ಸರಿಪಡಿಸಲಾಗದಷ್ಟು ನಿರ್ವರ್ಣವಾಗಿದೆಯೆಂದೇ ಹೇಳಬಹುದು.

ಹಾಗಾಗಿ ಧರ್ಮಸಭೆಯು 'ಹೆಣ್ಣು ಶಿಶುವಿನ' ಪರ ವಹಿಸುವ ಧೈರ್ಯದ ಹೆಜ್ಜೆಯನ್ನು ಮುಂದಿಟ್ಟಿದೆ. ಮರಿಯಳ ಜನನೋತ್ಸವದಂದು ಇತ್ತೀಚಿನ ದಿನಗಳಲ್ಲಿ 'ಮರಿಯಳ ಸ್ತುತಿಗೀತೆ' (ಮಗ್ನಿಫಿಕಾತ್) ಹಾಡುವುದರ ಜೊತೆಗೆ ಹೆಚ್ಚು ಹೆಚ್ಚು 'ಮರಿಯ' (ಹೆಣ್ಣುಮಗು)ಳನ್ನು ನಮ್ಮ ಕುಟುಂಬಗಳಲ್ಲಿ ಜನಿಸುವಂತೆ ಮತ್ತು ಬೆಳೆಸುವ ಉತ್ತೇಜನಕ್ಕೆ ನಮ್ಮನ್ನೇ ನಾವು ತೊಡಗಿಸಿಕೊಳ್ಳಲು ಮರೆಯಬಾರದು. ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಜಾಗೃತಿ ಜನರಲ್ಲಿ ಮೂಡಿಸಿ ಕುಟುಂಬಗಳಲ್ಲಿ ಹೊಸ ಜನ್ಮಕ್ಕೆ ಸಹಕಾರಿಯಾಗಬೇಕೆಂದು ಧರ್ಮ ಸಭೆ ಆಶಿಸುತ್ತದೆ. ಹಾಗಾಗಿ ಮರಿಯಳ ಜನನೋತ್ಸವದ ನವೇನಕ್ಕೆ ಇದುವೇ ವಿಷಯವಾಗಿರಬೇಕು (ಸೆಪ್ಟೆಂಬರ್ 8).

## 10. ಪಾಲನಾ ಸಮಿತಿ ಮತ್ತು ಹಣಕಾಸು ಸಮಿತಿಗಳ ರಚನೆ

ಕಳೆದ ಸುತ್ತೋಲೆಯಲ್ಲಿ ತಿಳಿಸಿರುವಂತೆಯೆ, ಪಾಲನಾ ಸಮಿತಿಯ ರಚನೆ ಹಾಗು ಕಾರ್ಯ ಚಟುವಟಿಕೆಗಳ ಕುರಿತು ಪ್ರಕಟಿಸಲು ಧರ್ಮಕೇಂದ್ರದ ಗುರುಗಳಿಗೆ ಕೋರಿಕೊಂಡಿದ್ದೆನು. ಇದರ ಬಗ್ಗೆ ಅರಿವು ಮೂಡಿಸಲು, ಶ್ರೀಸಾಮಾನ್ಯರಿಗೆ, ಮತ್ತು ಮಹಾಧರ್ಮಕ್ಷೇತ್ರದ ಯುವಕರಿಗೆ ಕಾರ್ಯಾಗಾರಗಳನ್ನು ಕೈಗೊಳ್ಳಲು, ವಿಚಾರಣೆ ಗುರುಗಳು ವಿಶೇಷ ತಂಡವನ್ನು ಸಂಪರ್ಕಿಸಬೇಕಾಗಿ ಕೇಳಿಕೊಳ್ಳುತ್ತೇನೆ (ತಂಡದ ಮುಖ್ಯಸ್ಥ ಫಾ. ಆರೋಕ್ಯಸ್ವಾಮಿ ಸೆಬಾಸ್ಟಿನ್, ಮೊಬೈಲ್ ಸಂಖ್ಯೆ: 9008004255). ಧರ್ಮಕೇಂದ್ರ ಪಾಲನಾ ಪರಿಷತ್ತಿನ ಬಗ್ಗೆ ಪ್ರಸ್ತುತ ಸುತ್ತೋಲೆಯಲ್ಲಿ ಮತ್ತು ತಾಬೊರ್ ಪತ್ರಿಕೆಯಲ್ಲಿ ಸಂಕ್ಷಿಪ್ತ ರೂಪದಲ್ಲಿ ಪ್ರಕಟಿಸಲಾಗಿದೆ.

## 11. ಸಂತಾಪ ಸೂಚನೆ

ಅ. ಪ್ರೆಶಿಯಸ್ ಬ್ಲಡ್ ಸಭೆಗೆ ಸೇರಿದ ಫಾ. ಫ್ರಾಂಕ್ಲಿನ್ ರಾಯಪ್ಪನ್‌ರವರು ಜುಲೈ 18, 2018 ರಂದು ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಕೆಲವು ವರ್ಷಗಳು ಮಹಾಧರ್ಮಕ್ಷೇತ್ರದಲ್ಲಿ ಸೇವೆಯಲ್ಲಿ ಮಾಡಿದ್ದರು.

ಆ. ಯೇಸುಸಭೆಗೆ ಸೇರಿದ ಫಾ. ಕ್ಲೌಡ್ ಡಿಸೋಜರವರು ದಿನಾಂಕ 9ನೇ ಜುಲೈ 2018ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಬೆಂಗಳೂರು ಮಹಾಧರ್ಮಕ್ಷೇತ್ರದಲ್ಲಿ ಹಾಗು ಇತರೆಡೆಗಳಲ್ಲಿ ಮಾನವ ಹಕ್ಕುಗಳ ಪ್ರತಿಪಾದಕರಾಗಿ ಸೇವೆ ಮಾಡಿದ್ದರು.

## 12. ಆಗಸ್ಟ್ ತಿಂಗಳಿನಲ್ಲಿ ಬರುವಂತಹ ಮಹಾಧರ್ಮಕ್ಷೇತ್ರದ ಗುರುಗಳ ಹುಟ್ಟು ಹಬ್ಬ

ವಿವರಗಳಿಗೆ ದಯವಿಟ್ಟು ಪುಟ 14ನ್ನು ನೋಡಿ.

## 13. ನಿವೃತ್ತ ಹೊಂದಿದ ಮಹಾಧರ್ಮಾಧ್ಯಕ್ಷರುಗಳ ಪಾಲಕರ ಹಬ್ಬ

ವಿವರಗಳಿಗೆ ದಯವಿಟ್ಟು ಪುಟ 14ನ್ನು ನೋಡಿ.

## 14. ಜುಲೈ ತಿಂಗಳಿನಲ್ಲಿ ಬರುವಂತಹ ಮಹಾಧರ್ಮಕ್ಷೇತ್ರದ ಗುರುಗಳ ಯಾಜಕೀಯ ಆಚರಣೆ

ವಿವರಗಳಿಗೆ ದಯವಿಟ್ಟು ಪುಟ 14ನ್ನು ನೋಡಿ.

## 15. ವರ್ಗಾವಣೆಗಳು ಮತ್ತು ನೇಮಕಾತಿಗಳು

ಮಹಾಧರ್ಮಕ್ಷೇತ್ರದ ಮೊದಲ ಸುತ್ತಿನ ವರ್ಗಾವಣೆಗಳು ಮತ್ತು ನೇಮಕಾತಿಗಳನ್ನು ಮಾಡಲು ನನಗೆ ಸಂತೋಷವೆನಿಸುತ್ತದೆ. ಪ್ರತಿಯೊಂದು ವರ್ಗಾವಣೆಯೂ ಸಹ ದೇವರ ಅಗಾಧವಾದ ಹಾಗು ಉತ್ಕೃಷ್ಟ ಪ್ರೀತಿಯನ್ನು ನೇಮಕಗೊಂಡವರು ಅನುಭವಿಸುತ್ತಾರಷ್ಟೇ ಅಲ್ಲದೆ ವರ್ಗಾವಣೆಯೆನ್ನುವುದು ದೈವೀಕೃಪೆಯ ಕ್ಷಣವಾಗಿದೆ. ನಿಮಗೆ ವಹಿಸಿಕೊಟ್ಟ ಸ್ಥಳಗಳಲ್ಲಿ ಅತ್ಯುತ್ತಮವಾದುದನ್ನು ನೀವು ಸೇವೆಯ ಮೂಲಕ ನೀಡುವಿರಿ ಎಂದು ನಾನು ಸಂದೇಹವಿಲ್ಲದೆ ಹೇಳಬಲ್ಲೆನು. ಅವರವರಲ್ಲಿರುವ ಪ್ರತಿಭೆಗಳನ್ನು ಮತ್ತು ಹುರುಪನ್ನು ದೇವರಿಗೆ ಯೋಗ್ಯ ಸಲಕರಣೆಯಂತೆ ಬಳಸುತ್ತಾ ಅಗತ್ಯವಿರುವವರ, ದೀನ ದಲಿತರ ಹಾಗು ನಿರ್ಗತಿಕರ ಸಹಾಯಕ್ಕೆ ಮುಂದಾಗೋಣ.

ವಿವರಗಳಿಗೆ ದಯವಿಟ್ಟು ಪುಟ 15ನ್ನು ನೋಡಿ.

ಶುಭಕಾಮನೆಗಳೊಂದಿಗೆ ದೇವರ ಆಶೀರ್ವಾದಗಳನ್ನು ಕೋರುತ್ತಕ್ರಿಸ್ತನಲ್ಲಿ ನಿಮ್ಮ ವಿಶ್ವಾಸಿ,

ಸಹಿ/–



**✠ ಪೀಟರ್ ಮಚಾದೊ**
ಬೆಂಗಳೂರು ಮಹಾಧರ್ಮಾಧ್ಯಕ್ಷರು